ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 2, May-June 2024, Pp. 10-18
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹರೂರುಮಕ್ಕಿ ದಾನಶಾಸನದಲ್ಲಿ ಇಮ್ಮಡಿ ಹರಿಹರ ರಾಯರ ಕುಮಾರ (ಧರ್ಮರಾಯ ಒಡೆಯ) ಎಂಬ ಹೊಸ ಅರಸನ ಉಲ್ಲೇಖ

**ಶ್ರೀದೇವಿ ತೇಜಸ್ವಿನಿ[1] ಮತ್ತು ಪ್ರೊ. ಮಂಜುನಾಥ ಎಂ.ಜಿ.[2]**

[1]ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
[2]ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಹೇಮಗಂಗೋತ್ರಿ, ಹಾಸನ.

**Abstract:**

*ಕರ್ನಾಟಕ ಇತಿಹಾಸ ಹಿಂದಿನಿಂದಲೂ ಸಂಶೋಧನೆಯ ಫಲಿತದಿಂದ ಸ್ಪಷ್ಟವಾದ ಮಾಹಿತಿಯನ್ನು ಹೊಂದಿದೆ. ಬಹುತೇಕ ಒಂದೇ ಬಗೆಯಲ್ಲಿ ಇದ್ದರೂ ಕೆಲವು ಅಪರೂಪದ ಸಂಗತಿಗಳು ಸಂಶೋಧನೆಯಿಂದ ಲಭ್ಯವಾಗಿ ಮಾಹಿತಿಯು ಮತ್ತಷ್ಟು ಪುಷ್ಟಿಗೊಳ್ಳುತ್ತದೆ. ಶೃಂಗೇರಿ ತಾಲೂಕಿನ ಹರೂರುಮಕ್ಕಿ ಗ್ರಾಮದಲ್ಲಿ ವಿಜಯನಗರ ಕಾಲದ ಶಾಸನದಲ್ಲಿ ಎರಡನೇ ಹರಿಹರ ರಾಯರ ಮಗ ಧರ್ಮರಾಯ ಒಡೆಯ ಎಂಬ ಉಲ್ಲೇಖವಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡ ಇನ್ನೂ ಅನೇಕ ವಿಷಯಗಳನ್ನು ಪ್ರಸ್ತುತ ಲೇಖನದಲ್ಲಿ ವಿವರಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಶಾಸನ ಅಧ್ಯಯನ, ಹರೂರುಮಕ್ಕಿ, ದಾನಶಾಸನ, ಧರ್ಮರಾಯ ಒಡೆಯ, ಇಮ್ಮಡಿ ಹರಿಹರ ರಾಯರ ಕುಮಾರ.*

## ಪೀಠಿಕೆ

ಕನ್ನಡ ಸಂಶೋಧನೆಯು ಪ್ರವೇಶಿಸಿರುವ ಅನೇಕ ಮಹತ್ವದ ನೆಲೆಗಳಲ್ಲಿ ಶಾಸನ ಶಾಸ್ತ್ರವು ಒಂದು. ಶಾಸನಗಳನ್ನು ಕುರಿತಾದ ಅಧ್ಯಯನವು ಪುರಾತತ್ವ ಇಲಾಖೆಯ ಅಡಿಯಲ್ಲಿ ಪ್ರಾರಂಭ ಕಾಲದಲ್ಲಿ ನಡೆದಿರುವುದನ್ನು ಗಮನಿಸಬಹುದು. ಭಾರತೀಯರಿಗೆ ಚಾರಿತ್ರಿಕ ಪ್ರಜ್ಞೆ ಇಲ್ಲ ಎನ್ನುವ ಭಾವನೆ ಪಾಶ್ಚಾತ್ಯ ವಿದ್ವಾಂಸರಲ್ಲಿ ಪ್ರಕಟವಾದ ಸಂದರ್ಭದಲ್ಲಿ, ಇತಿಹಾಸದ ಅಧಿಕೃತ ದಾಖಲೆಗಳಿಲ್ಲ ಎಂದು ಆಪಾದಿಸುತ್ತಿದ್ದ ಸಂದರ್ಭದಲ್ಲಿ ಶಾಸನಗಳು ಪ್ರಮುಖ ದಾಖಲೆಗಳಾಗಿ ಅವರಿಗೆ ಕಂಡು ಬಂದವು. ಆರಂಭ ಕಾಲದ ಪಾಶ್ಚಾತ್ಯ ವಿದ್ವಾಂಸರಿಗೆ ರಾಜಕೀಯ ಹಾಗೂ ಸಾಮಾಜಿಕ ಚರಿತ್ರೆಯನ್ನು ಪುನರ್‌ರಚಿಸುವಲ್ಲಿ ಉಳಿದೆಲ್ಲವುಗಳಿಗಿಂತ ಶಾಸನಗಳು ಮುಖ್ಯವಾಗಿವೆ. ಕನ್ನಡನಾಡಿನ ವಿವಿಧ ಅರಸು ಮನೆತನಗಳ, ಸಾಮಂತರ ಆಳ್ವಿಕೆಯಲ್ಲಿ ಹುಟ್ಟಿದ ಶಾಸನಗಳು ನಾಡಿನ ಜನಾಂಗದ ಬದುಕಿನ ವಿಶ್ವಕೋಶಗಳೆನಿಸಿವೆ.[1]

ಕನ್ನಡ ನಾಡಿನಲ್ಲಿ ಸಾವಿರಾರು ಶಾಸನಗಳಿವೆ ಅಂತಹ ಶಾಸನಗಳಲ್ಲಿ ಶೃಂಗೇರಿ ತಾಲೂಕಿನ ಹರೂರುಮಕ್ಕಿ ಗ್ರಾಮದಲ್ಲಿ ದೊರೆತಿರುವ ಶಾಸನವು

[1] ನಾಗಭೂಷಣ ಸಿ. *ಕನ್ನಡ ನಾಡಿನ ಶಾಸನಗಳ ಅಧ್ಯಯನ: ಕೆಲವು ಗ್ರಹಿಕೆಗಳು.* ಪು.ಸಂ.2

***Please cite this article as:*** ಶ್ರೀದೇವಿ ತೇಜಸ್ವಿನಿ ಮತ್ತು ಮಂಜುನಾಥ ಎಂ.ಜಿ. (2024). ಹರೂರುಮಕ್ಕಿ ದಾನಶಾಸನದಲ್ಲಿ ಇಮ್ಮಡಿ ಹರಿಹರ ರಾಯರ ಕುಮಾರ (ಧರ್ಮರಾಯ ಒಡೆಯ) ಎಂಬ ಹೊಸ ಅರಸನ ಉಲ್ಲೇಖ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(2), 10–18

ಕೂಡ ಒಂದಾಗಿದೆ. ಈ ಶಾಸನದ ಬಗ್ಗೆ 2020 ರಲ್ಲಿ 'ಆರ್ಕಿಯಾಲಾಜಿಕಲ್ ಸರ್ವೇ ಆ ಇಂಡಿಯಾ' ಸಂಸ್ಥೆಯ ಶಾಸನ ವಿಭಾಗದ ವಾರ್ಷಿಕ ವರದಿಯಲ್ಲಿ ಪ್ರಕಟಿಸಲಾಗಿದೆ. ಇದಲ್ಲದೆ ಅಂತರ್ಜಾಲ ಸಂಶೋಧನಾ ಗೋಷ್ಠಿಯೊಂದರಲ್ಲಿ ಈ ಶಾಸನ ಕುರಿತು ವಿಷಯ ಮಂಡಿಸಿದ್ದಾರೆ. ನಾಗರಾಜ ರಾವ್ ಎಚ್.ಎಂ. ತಮ್ಮ ಕೃತಿಯಲ್ಲಿ ಈ ಶಾಸನದ ಬಗ್ಗೆ ಪಠ್ಯಸಹಿತವಾಗಿ ಉಲ್ಲೇಖಿಸಿದ್ದಾರೆ[2].

ಶೃಂಗೇರಿ ತಾಲೂಕಿನ ಹರೂರುಮಕ್ಕಿ ಗ್ರಾಮದಲ್ಲಿ ದೊರೆತಿರುವ ಹರೂರುಮಕ್ಕಿ ಶಾಸನವು ಗ್ರಾಮದ ವನದುರ್ಗಿ ದೇವಾಲಯದ ಬಳಿಯಿದೆ. ಶೃಂಗೇರಿಯಿಂದ ನೆಮ್ಮಾರು, ಅಳಲೆಗುಡ್ಡದ ರಸ್ತೆಯಲ್ಲಿ ಮಲ್ಲಂದೂರು ಮಾರ್ಗ ಮಧ್ಯ ಜನಸಂಪರ್ಕ ರಸ್ತೆಯಿಂದ 2 ಕಿ.ಮೀ ಕಾಡುರಸ್ತೆಯಲ್ಲಿ ಹೋದರೆ ವನದುರ್ಗಿ ದೇವಸ್ಥಾನ ಸಿಗುತ್ತದೆ. ಈ ದೇವಾಲಯವು ಎತ್ತರವಾದ ಪ್ರದೇಶದ ದೊಡ್ಡ ಮರವೊಂದರ ಕೆಳಗೆ ಸಮತಟ್ಟಾದ ಜಾಗದಲ್ಲಿದೆ. ಇದು ಪ್ರಸ್ತುತ ಶಾಸನದಲ್ಲಿ ಸಾಕ್ಷಿಯಾಗಿ ಬರುವ ಉಯಂಲಿ ದೇವತೆಯಾಗಿರಬಹುದು. ಈ ಎತ್ತರದ ದೇವಸ್ಥಾನದ ಕೆಳಗಿನ ಒಂದು ಗದ್ದೆ ಬಯಲಿನಲ್ಲಿ ಹರೂರುಮಕ್ಕಿ ಶಾಸನ ದೊರೆತಿದೆ.

ಈ ಶಾಸನವು ಗ್ರಾನೈಟ್ ಕಲ್ಲಿನಲ್ಲಿದ್ದು, 32 ಇಂಚು ಉದ್ದ 18.5 ಇಂಚು ಅಗಲವಿದೆ. ಈ ಶಾಸನದಲ್ಲಿ ಮೇಲ್ಭಾಗ ದಾನದ ಕ್ರಿಯೆ ಸೂಚಿಸುವ ವಾಮನ ಚಿತ್ರ ಮತ್ತು ಸೂರ್ಯ–ಚಂದ್ರರ ಚಿತ್ರವಿದೆ. ಬಹುತೇಕ ದಾನ ಶಾಸನಗಳು ಈ ಮಾದರಿಯಲ್ಲೇ ಇರುತ್ತವೆ. ಈ ಶಾಸನವು ಮಾಸಿದಂತೆ ಕಾಣುತ್ತದೆ. ಈ ಶಾಸನದ ಬರವಣಿಗೆಯು ಕನ್ನಡ ಭಾಷೆ ಹಾಗೂ ಲಿಪಿಯಾಗಿದೆ. 33 ಸಾಲಿನ ಈ ಶಾಸನವು ಸಾಕಷ್ಟು ಮಾಹಿತಿ ಒಳಗೊಂಡಿದ್ದು ಧರ್ಮರಾಯ ಒಡೆಯರ ಉಲ್ಲೇಖವು ಇದೆ. ಈತ ವಿಜಯನಗರ ಸಾಮ್ರಾಜ್ಯದ ಸಂಗಮವಂಶದ ಇಮ್ಮಡಿ ಹರಿಹರರಾಯರ ಕುಮಾರ ಎಂದು ಶಾಸನೋಕ್ತವಾಗಿ ಹೇಳಿರುವ ವಿಚಾರ ಇದೇ ಮೊದಲು ಪ್ರಕಟವಾಗಿದೆ.



**ಚಿತ್ರ 1: ಹರೂರು ಮಕ್ಕಿ ಶಾಸನ**

**ಹರೂರು ಮಕ್ಕಿ ಶಾಸನದ ಪಠ್ಯ/ಸಾಲುಗಳು**

ಹರೂರು ಮಕ್ಕಿ ಶಾಸನದಲ್ಲಿ 33 ಸಾಲುಗಳಿವೆ. ಅವುಗಳೆಂದರೆ

1. ಶ್ರೀ ಗಣಾಧಿಪತೆಯೇ ನಮಃ। ಸ್ವಸ್ತಿ ಶ್ರೀ ಜಯಾಭುದ–
2. ಯ ಶಕವರುಷ 1306ನೆಯ ರುಧಿರೋದ್ಗಿರಿಸಂವತ್ಸ–
3. ರದ ದ್ವಿತೀಯ ಭಾದ್ರಪದ ಬ 13 ಸುದಲು ಶ್ರೀಮಂನ್ಮಹಾರಾ–
4. ಜಾಧಿರಾಜಾಜಪರಮೇಶ್ವರ ಶ್ರೀವೀರಹರಿಹರ ರಾಯರ
5. ಕುಮಾರಧರ್ಮ್ಮರಾಯ ಒಡೆಯರು ಸುಕಸಂಕಥಾವಿನೋದ
6. ದಿಂರಾಜ್ಯಗೆಯ್ವುತಂ ವಿಹಕಾಲದಲು ಆರಗದಹದಿ–

[2] ನಾಗರಾಜ ರಾವ್ ಎಚ್.ಎಮ್. *ಶಾಸನ ಸಿರಿ.* ಪುಟ. 110–113

7. ನೆಂಟುಕ(ಂ*)ಪಂಣದ ಒಳಗಣ ಕಿಕುಂದ ನಾಡ ಮೇಲುಭಾಗದ
8. ಮೆಣಸೆಯ ಬೀರವೆಗ್ಗಡೆ ಕೊಚ್ಚವಳ್ಳಿ ಬೊಂಮಣಹೆಗ್ಗಡೆ
9. ಕಡಬ ಬೋಳು ಚಿಕಸೊಡ್ಡೆಯ ಗಡಿಹ.ನವಿನಬೊಂಮಣ್ಣ ಹೊ
10. ನುಕಮಂದುಹ್ಣಾ. ಬಳಿಯಕೊಟಗೆಅತಿವಳಿಯಒಳಗಡೆಅತಿವಳಿಯ
11. ಕೊಟಗ ತಯಿಲ್ಬೆಹೆಗಡೆ ಚಉಡಿಸೆಟ್ಟಿ ಕೊಡಿಯಂಣ ಬೋಳೂರ ಬುವಗಳಿ
12. ಯ ಕೋಟೆಗಡಿ ಹೊಂಮ್ಮನ ಹೊಯ್ಸಿ। ಚಂಮ್ಮಣ ಬೆಳುನಾಯ್ಕ ಚೆಂದಗುಡದ
13. ಡೆಯ ತಂಮಣಹೆಗ್ಗಡೆ ಜಕ್ಕಾನ ಅ(ಗ)ಳಿಯ. ಡೆ ಕಳಸಗಡಿರಾ .ಣ್ಣ
14. ಬೊಳದಂಮ್ಮಂಣ ತಂಗಿಯಬ್ಬೆ। ತಂಮ್ಮಣ್ಣಕುಟಿ ಆಂ(ಮ್ಮ)ತಪಡಿ . .
15. ದಲಗಡಿಯ ಬೊಂಮ್ಮಣನೊಳಗಾದ ಹಂನೆರಡಜ ನಾಡವರು ಕೌಶಿಕಗೋ
16. ತ್ರದ ಬಂಮ್ಮಂಣ್ಣಂಗಳ ಮಕ್ಕಳು ನರಹರಿಭಟ್ಟರಿಗೆ ಕೊಟ್ಟ ದಾನ ಪತ್ರಶಾಸ–
17. ನದ ಕ್ರಮವೆಂತೆಂದ[ರೆ*] ನಂಮ್ಮಮೇಲುಭಾಗದ ನಾಡಹಜವಿನಭೂಮಿ ಹರ
18. ಊಜ ಒಳಗುಳ್ಳ ಮಲುವಿನಬಗ್ಯೆಯಕುಳ ಒಂದು ಸಳಿಗೆ ಉಳ್ಳ ಭೂಮಿ ಹಿ–
19. (ರಿ)ಯ ಮನೆ ನಿಧಿನಿಕ್ಷೇಪಜಲಪಾಶಾಣ ಆಕ್ಷೀಣ ಆಗಾಮಿಆಗ
20. ಭೋಗತೇಜಸಾಮ್ಯಯೆನುಳಂದಾದ ॥ ಆ ನರಹರಿಭಟ್ಟರಿಗೆ ಸೂರ್‍ಯ್ಯ
21. ಗ್ರಹಣ ಪುಂಣ್ಯಕಾಲದಲು ಪಶ್ಚಿಮವಾಹಿನಿಯ ತುಂಗಾಭದ್ರಾತೀ–
22. ರ ಗೋಪಾಳದೇವರಲು ಶ್ರೀವಿದ್ಯಾರಂಣ್ಯರ ಪ(ಪಾ)ದಂಗಳು ಶ್ರೀಚರಣಸಂನಿಧಿ–
23. ಯಲು ದಾನಾದಾನಾದ್ಯವಾಗಿ ಧಾರೆಯ ನೆಜ್ದು ಕೊಟಉ ಯಿಧರ್ಮ್ಮವ
24. ನು ಆಚಂದ್ರಾರ್ಕ್ಕ ಸ್ಥಾಯಿಯಾಗಿ ಪಾಲ್ಸಿಸಿಹೋಉ ಯಿಧರ್ಮ್ಮಕ್ಕೆ ಆರುಪಾ
25. ಲ್ಸಿ ಬಂದವರು ವಾರಣಾಸಿಯಲಿ . ನೂಜ್ಂಟು ಕಪಿಲೆಯನು ಗೋದಾನವ
26. ಕೊಟ್ಟಫಲ ಆರೊಬ್ಬನು ಯಿ ಧರ್ಮ್ಮಕ್ಕೆ ಅಳುಪಿದವನು ವಾರಣಾಸಿಯಲಿ
27. ಗೋ(ವು) ಬ್ರಾಹ್ಮರನು ವದ್ಸಿದ ಪಾಪಕ್ಕೆ ಹೋಹನು॥ ಸ್ವದತ್ತಾಂ ಪರದಂ
28. ತ್ತಾಂ ವಾ ಯೋ ಹರೇತಿ ವಸುಂದರಾ ಷಷ್ಟಿರ್ವರುಷ ಸಹಸ್ರಾಣ ವಿಷ್ಟಾ
29. ಯಾಂ ಜಾಯತೇ ಕ್ರಿಮಿ। ದಾನಪಾಲನಯೋರ್ಮದ್ದೆದಾನಾಶ್ರೇಯೋನು
30. ಪಾಲನಂ ದಾನಾರ್ತ್ ಸ್ವರ್ಗ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ ॥
31. ಯಿಂತ್ತುವದಕ್ಕೆ ಆ ನಾಡಸೇನ ಬೊಮ್ಮದೇವರ ಬ(ರ*)ಹ ಯಿಂ
32. ತ್ತುದಕ್ಕೆ ಆ ನಾಡವರ ಒಪ್ಪ ಶ್ರೀ ಉಯಂಲಿದೇವಿ ॥
33. ಶ್ರೀಶ್ರೀಶ್ರೀ

## ಗಾಣಪತ್ಯ

ಹಿಂದೂ ಸಂಪ್ರದಾಯದಲ್ಲಿ ಗಣಪತಿಯನ್ನು ಪ್ರತಿ ಕಾರ್ಯದ ಪ್ರಾರಂಭದಲ್ಲಿ ಪ್ರಾರ್ಥಿಸುವುದು ಸಂಪ್ರದಾಯ. ಗಣಪತಿಯನ್ನು ಆದಿಯಲ್ಲಿ ಸ್ಮರಿಸಿಕೊಳ್ಳುವುದನ್ನು ಈ ಶಾಸನದಲ್ಲೂ ಕಾಣಬಹುದಾಗಿದೆ. ಗಣಪತಿ ಆರಾಧನೆಗೆ ಇರುವ ಪೂಜಾಪದ್ಧತಿಯನ್ನು ಗಾಣಪತ್ಯ ಎನ್ನುತ್ತಾರೆ. ಗಣಪತಿಗೆ ಮೊದಲ ಪೂಜೆ ಎಂಬುದು ಲೋಕರೂಢಿ. ಬಹುತೇಕ ಶಾಸನಗಳ ಪ್ರಾರಂಭದಲ್ಲಿ 'ಶ್ರೀಗಣಾಧಿಪತಯೇ ನಮಃ' ಎಂಬ ಸ್ತೋತ್ರದೊಂದಿಗೆ ಬರೆದಿರುತ್ತಾರೆ.

## ಶಾಸನದ ಕಾಲ

ಇದು ದಾನಶಾಸನ. ಕ್ರಿ.ಶ. 1383, ಸೆಪ್ಟೆಂಬರ್ 25 ಶುಕ್ರವಾರ[3] ಸೂರ್ಯಗ್ರಹಣದಂದು ದಾನ ನೀಡಲಾಗಿದೆ. ಅದು ದ್ವಿತೀಯ ಭಾದ್ರಪದ ಮಾಸ. ಆ ದಿನ ವಿಶೇಷವಾಗಿದ್ದು, ವಿದ್ಯಾರಣ್ಯರ ಸಮ್ಮುಖದಲ್ಲಿ ಈ ದಾನವನ್ನು ಒಂದು ಧಾರ್ಮಿಕ ಕ್ರಮ ವಿಧಿವಿಧಾನಗಳಿಂದ ಕೊಟ್ಟಿರುತ್ತಾರೆ.

## ಶಾಸನ ದೊರೆತ ಸ್ಥಳ

ಇದು ಶೃಂಗೇರಿಯಿಂದ 22 ಕಿಲೋಮೀಟರ್ ದೂರದಲ್ಲಿರುವ ಹರೂರುಮಕ್ಕಿ ಗ್ರಾಮದಲ್ಲಿದೆ. ಈ ಶಾಸನದ ಎದುರು 7 ಅಡಿ ಎತ್ತರದ

[3] Swamikannu Pillai, L.D. *An Indian Ephemeris A.D.700 to A.D. 1799, Vol. IV*, pp368-369.

ವೀರಗಲ್ಲೊಂದನ್ನು ನಿಲ್ಲಿಸಿದ್ದಾರೆ. ಬಹುಶಃ ಅದು ಕೂಡ ಒಂದೇ ಉದ್ದೇಶಕ್ಕೆ ಸಂಬಂಧಿಸಿದಂತೆ ಕೊರೆಸಲ್ಪಟ್ಟ ವೀರಗಲ್ಲಾಗಿದೆ ಎನಿಸುತ್ತದೆ. ವೀರಗಲ್ಲು ಶಾಸನರಹಿತವಾಗಿ ಲಭ್ಯವಾಗಿದೆ. ಈ ವೀರಗಲ್ಲು ಉಬ್ಬುಶಿಲ್ಪದಿಂದ ಕೂಡಿದೆ. ಈ ವೀರಗಲ್ಲು[4] ಬಹುಶಃ ಪಲ್ಲಕ್ಕಿಯ ಮೇಲೆ ಉಲ್ಲೇಖಿತ ರಾಜ ಧರ್ಮರಾಯ ಒಡೆಯನ ಬಗ್ಗೆ ಆಗಿದ್ದರೆ ಸಂಶೋಧನೆಗೆ ಪೂರಕವಾಗಿರುತ್ತದೆ.



**ಚಿತ್ರ 2: ಹರೂರುಮಕ್ಕಿ ಶಾಸನದ ಎದುರಿಗಿರುವ ವೀರಗಲ್ಲು**

### ಶಾಸನದ ಉದ್ದೇಶ

ಆರಗದ 18 ಕಂಪಣದಲ್ಲಿ ಕಿಕ್ಕುಂದ ನಾಡ ಮೇಲುಭಾಗದ ಮೆಣಸೆಯ ಬೀರವೆಗ್ಗಡೆ ಮತ್ತು ಇತರ ಹನ್ನೆರಡರ ನಾಡವರು ಸೇರಿ ಕೌಶಿಕಗೋತ್ರದ ಬಮ್ಮಣ್ಣನವರ ಮಕ್ಕಳು ನರಸಿಂಹಭಟ್ಟರಿಗೆ ಕೊಟ್ಟ ದಾನಪತ್ರ ಶಾಸನವಾಗಿದೆ. ಈ ಶಾಸನದ ಪ್ರಕಾರವಾಗಿ ಮೇಲುಭಾಗದ ನಾಡಹರವಿನ ಭೂಮಿ ಆ ಊರ ಒಳಗಿನ ಮಲುವನ ಬಗ್ಗೆಯ ಕುಳ ಒಂದು ಸಡಿಗೆ ಇದ್ದ ಭೂಮಿ, ಹಿರಿಯಮನೆ, ನಿಧಿ, ನಿಕ್ಷೇಪ, ಜಲ, ಪಾಶಾಣ, ಅಕ್ಷೀಣ ಆಗಾಮಿ ಆಗ ಭೋಗತೇಜ ಸಾಮ್ಯ ಏನುಳ್ಳದಾದ ಎಲ್ಲವನ್ನೂ ದಾನವಾಗಿ ನೀಡಬೇಕೆಂದು ಹೇಳಿದೆ. ಶಾಸನದ ಮೇಲ್ತುದಿಯಲ್ಲಿ ವಾಮನನ ಚಿತ್ರವಿದೆ. ಕೈಗಳಲ್ಲಿ ಕೊಡೆ, ಪಾತ್ರೆಗಳನ್ನು ಹಿಡಿದುಕೊಂಡ ಮನುಷ್ಯನ ಚಿತ್ರವಿರುವ ಇದನ್ನು ಗಡಿಕಲ್ಲು ಅಥವಾ ಮೇರೆಗಲ್ಲು ಎಂದೂ ಸಹ ತಿಳಿಯಬಹುದಾಗಿದೆ. ಇವುಗಳು ವೈಷ್ಣವ ಧರ್ಮದ ದಾನ ಭೂಮಿಗಳಿಗೆ ಸಂಬಂಧಿಸಿರುತ್ತವೆ[5]. ಅದು ಸೂರ್ಯಗ್ರಹಣ ಪುಣ್ಯಕಾಲದಲ್ಲಿ ಪಶ್ಚಿಮವಾಹಿನಿಯ ತುಂಗಭದ್ರಾ ತೀರದ ಗೋಪಾಳದೇವರು, ಶ್ರೀ ವಿದ್ಯಾರಣ್ಯಂಗಳ ಶ್ರೀಚರಣಸಂನಿಧಿಯಲ್ಲಿ ಈ ದಾನವನ್ನು ನೀಡಿರುತ್ತಾರೆ. ಇದರಲ್ಲಿ ಕೆಲವು ಭೂಭಾಗಗಳನ್ನು ಉಲ್ಲೇಖಿಸಲಾಗಿದೆ.

### ಎರಡನೇ ಹರಿಹರ (1376–1404)

ವಿಜಯನಗರದ ಅರಸ ಒಂದನೆಯ ಬುಕ್ಕನ ಮಗ ಇಮ್ಮಡಿ ಹರಿಹರ ರಾಜ[6]. ಮೊದಲನೆಯ ಹರಿಹರನಿಗೆ (ಕ್ರಿ.ಶ.1343ರವರೆಗೆ) ಕಂಪ, ಬುಕ್ಕ, ಮಾರಪ್ಪ, ಮುದ್ದಪ್ಪ ಎಂಬ ನಾಲ್ಕು ಜನ ತಮ್ಮಂದಿರು ಆದರೆ ಬುಕ್ಕನ ಹಿರಿಯ ಸಹೋದರ ಕಂಪ ಕ್ರಿ.ಶ. 1355ರವರೆಗೂ ರಾಜನಾಗಿ ಆಳ್ವಿಕೆ ಮಾಡಿದ. ಆನಂತರ ಬುಕ್ಕ ಅಧಿಕಾರಕ್ಕೆ ಬಂದು ಕ್ರಿ.ಶ.1379ರವರೆಗೂ ಆಳ್ವಿಕೆ ಮಾಡಿದ. ಬುಕ್ಕನ ಮಗ ಕುಮಾರ ಕಂಪಣನು ತಂದೆಗೆ ರಾಜ್ಯಕಾರ್ಯದಲ್ಲಿ ಬಲಗೈನಂತಿದ್ದ. ಕಂಪಣನ ಪತ್ನಿ ಗಂಗಾದೇವಿ ಕವಿಯತ್ರಿಯಾಗಿದ್ದು, ಸಂಸ್ಕೃತದಲ್ಲಿ *ಮಧುರಾವಿಜಯಂ* ಎಂಬ ಕಾವ್ಯದ ಮೂಲಕ ಪತಿಯ ಶೌರ್ಯವನ್ನು ವರ್ಣಿಸಿದ್ದಾಳೆ. ತಂದೆಗೂ

---

[4] ಮಂಜುನಾಥ ಎಮ್. ಜಿ. (2011). *ಮಾಸ್ತಿಕಲ್ಲು ವೀರಗಲ್ಲು ಮತ್ತು ನಿಸಿದಿ ಶಾಸನಗಳು.* ಪುಟ. 10.

[5] ಶ್ರೀನಿವಾಸ ರಿತ್ತಿ. (2000). *ಪೂರ್ವೋಕ್ತ.* ಪುಟ. 100

[6] ಶ್ರೀ ದೇಸಾಯಿ ಪಾಂಡುರಾಯರು ಮತ್ತು ಶ್ರೀ ಎಚ್. ಕೃಷ್ಣ. (1936). *ವಿಜಯನಗರ ಸಾಮ್ರಾಜ್ಯ 1336–1681.* ಪುಟ.45.

ಮುನ್ನ ಕ್ರಿ.ಶ.1374ರಲ್ಲಿ ಕಂಪಣ ಮರಣವನ್ನಪ್ಪುತ್ತಾನೆ. ಆನಂತರವೇ ಬುಕ್ಕನ ಇನ್ನೊಬ್ಬ ಮಗ ಎರಡನೇ ಹರಿಹರ ಪಟ್ಟಕ್ಕೆ ಬರುವುದು. ಇಮ್ಮಡಿ ಹರಿಹರ ಸುಮಾರು 20 ವರ್ಷಗಳಷ್ಟು ಕಾಲದವರೆಗೂ[7] ವಿಜಯನಗರ ಸಾಮ್ರಾಜ್ಯ ಆಳ್ವಿಕೆ ಮಾಡುತ್ತಾನೆ. ಇಮ್ಮಡಿ ಹರಿಹರನಿಗೆ ಮಹಾರಾಜಾಧಿರಾಜ[8] ಎಂಬ ಬಿರುದನ್ನು ಧರಿಸಿದ ಮೊದಲ ರಾಜ ಎಂಬ ಹೆಗ್ಗಳಿಕೆ ಇದೆ.

ಹರಿಹರನ ಕಾಲವನ್ನು ಕ್ರಿ.ಶ.1378 ರಿಂದ 1404[9] ಎಂದೂ ಸಹ ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. 2ನೇ ಹರಿಹರ ಕೆಲವು ಅಡೆತಡೆಗಳನ್ನು ಎದುರಿಸಿ ಪಟ್ಟಕ್ಕೆ ಬರಬೇಕಾಯಿತು.

**ಎರಡನೇ ಹರಿಹರನು ಪಟ್ಟಕ್ಕೆ ಬಂದ ಸನ್ನಿವೇಶದಲ್ಲಿ ಆಡಳಿತದ ಪರಿಸ್ಥಿತಿ**

1. ಎರಡನೇ ವಿರೂಪಾಕ್ಷನನ್ನು ತಮಿಳು ಪ್ರಾಂತಗಳ ಆಡಳಿತಕ್ಕೆ ನೇಮಿಸಲಾಯಿತು. ಅಲ್ಲಿ ಈ ಹಿಂದೆ ಕಂಪಣನು ಅಧಿಕಾರದಲ್ಲಿದ್ದನು.
2. ಉದಯಗಿರಿ ರಾಜ್ಯವು 1ನೇ ದೇವರಾಯನ ಆಳ್ವಿಕೆಗೆ ಒಳಪಟ್ಟಿತು.
3. 2ನೇ ಬುಕ್ಕ ಮುಳಬಾಗಿಲು ರಾಜ್ಯಕ್ಕೆ ರಾಜ್ಯಪಾಲನೂ, ಯುವರಾಜನೂ ಆಗಿದ್ದನು.
4. ಮಂತ್ರಿಯಾದ ಮಾಧವನು, ––– ಆರಗ ಮತ್ತು ಬನವಾಸಿ ಪ್ರದೇಶಗಳನ್ನು ನೋಡಿಕೊಳ್ಳಲು ನೇಮಿತನಾದನು. ––– ಅಲ್ಲಿ ಮೊದಲು ಮಾದಪ್ಪನು ಅನಂತರ ಉದಯಗಿರಿ ವೀರಣ್ಣನೂ ಆಡಳಿತದ ಸೂತ್ರಗಳನ್ನು ಹಿಡಿದಿದ್ದರು.

ಎರಡನೇ ಹರಿಹರನಿಗೆ ಇಬ್ಬರು ಮಡದಿಯರು ಪಂಪಾದೇವಿ ಮತ್ತು ಮಲ್ಲಾದೇವಿ[10]. ಇವರಿಗೆ ನಾಲ್ಕು ಜನ ಮಕ್ಕಳು. ಅವರು ತಂದೆಯ ಆಳ್ವಿಕೆ ಸಂದರ್ಭದಲ್ಲಿ ಸಹಾಯಕ್ಕೆ ನಿಂತರು. ಆರಂಭಿಕ ಸಂದರ್ಭದಲ್ಲಿ ಅಸಮಾಧಾನಗೊಂಡ ನಾಯಕರುಗಳನ್ನು ಅಡಗಿಸಲು ಪ್ರಯತ್ನ ನಡೆಯಿತು. ಬುಕ್ಕನು ಮೊದಲು ಬಾರಕೂರಿನ ಭೈರರಸನಾಯಕರನ್ನು ಅಡಗಿಸಿದನು. ನಂತರ ಚೋಳ ಮತ್ತು ಪಾಂಡ್ಯ ಪ್ರದೇಶದ ತುಂಡೀರನಾಯಕರನ್ನು ದಮನಗೊಳಿಸಿದರು. ಆದರೆ ಅದು ಪುನರಾರಂಭಿಸಿದಾಗ ಎರಡನೇ ವಿರೂಪಾಕ್ಷ ಮತ್ತೊಮ್ಮೆ ನಿಯಂತ್ರಣಕ್ಕೆ ತಂದು ಅಧಿಕಾರವನ್ನು ಪಡೆದನು[11]. ಸಿಲೋನಿಗೆ ಹೋಗಿ ಭುವನೈಕಬಾಹುವಿನಿಂದ ಕಾಣಿಕೆ ವಸೂಲು ಮಾಡಿದನು. ಹೀಗೆ ಇಮ್ಮಡಿ ಹರಿಹರ ತನ್ನ ಮಕ್ಕಳನ್ನೇ ಮಂಡಲಾಧಿಪತಿಗಳಾನ್ನಾಗಿ ನಿಯೋಜಿಸಿದ್ದು[12] ಅನುಕೂಲವಾಯಿತು. ಆರಗ ಸಂಸ್ಥಾನವು ವಿಜಯನಗರ ಸಾಮ್ರಾಜ್ಯದಲ್ಲಿ ಆರು ವಿಭಾಗಗಳಲ್ಲಿ ಒಂದಾಗಿತ್ತು. ಉಳಿದ ಎಲ್ಲಾ ರಾಜರನ್ನು ಗಮನಿಸಿದಂತೆ ಆರಗವನ್ನು ನೋಡಿಕೊಳ್ಳುತ್ತಿದ್ದ ಚಿಕ್ಕರಾಯ ಒಡೆಯ ಮತ್ತಿತರ ಸಹೋದರರು ಮತ್ತು ಅವರ ತಾಯಿ ವಿವರ ಈ ಕೆಳಗಿನಂತಿದೆ.

1. ಉದಯಗಿರಿ ದೇವರಾಯ (ತಾಯಿ–ಮಲ್ಲಾದೇವಿ)
2. ಪೆನುಗೊಂಡ 2ನೇ ಬುಕ್ಕ (ತಾಯಿ–ಪಂಪಾದೇವಿ)
3. ಮುಳವಾಗಿಲು 2ನೇ ಬುಕ್ಕ (ತಾಯಿ–ಪಂಪಾದೇವಿ)
4. ಬಾರಕೂರು–ತುಳುರಾಜ್ಯ

[7] ತಿಪ್ಪೇರುದ್ರಸ್ವಾಮಿ ಎಚ್. (2018). *ಕರ್ನಾಟಕ ಸಂಸ್ಕೃತಿ ಸಮೀಕ್ಷೆ.* ಪುಟ. 138–139

[8] ಶ್ರೀ ದೇಸಾಯಿ ಪಾಂಡುರಾಯರು ಮತ್ತು ಶ್ರೀ ಎಚ್. ಕೃಷ್ಣ. (1936). *ಪೂರ್ವೋಕ್ತ.* ಪುಟ.45.

[9] ಕೃಷ್ಣರಾವ್ ಎಂ. ವಿ. ಮತ್ತು ಎಂ. ಕೇಶವಭಟ್ಟ. (1970). *ಕರ್ನಾಟಕದ ಇತಿಹಾಸ ದರ್ಶನ.* ಪುಟ 361

[10] ಕೃಷ್ಣರಾವ್ ಎಂ. ವಿ. ಮತ್ತು ಎಂ. ಕೇಶವಭಟ್ಟ. (1970). *ಪೂರ್ವೋಕ್ತ.* ಪುಟ. 46

[11] ಅದೇ. ಪುಟ. 46

[12] ಅದೇ. ಪುಟ.362

5. ಆರಗ–ಮಲೆರಾಜ್ಯ ಚಿಕ್ಕರಾಯ (ತಾಯಿ– ಮಲ್ಲಾದೇವಿ)
6. ರಾಜಗಂಭೀರ/ಮಧುರೆ 2ನೇ ವಿರೂಪಾಕ್ಷ (ತಾಯಿ– ಮಲ್ಲಾದೇವಿ)

**ವಿದ್ಯಾರಣ್ಯರು (1375–86)[13]**

ವಿದ್ಯಾರಣ್ಯರು 14ನೇ ಶತಮಾನದಲ್ಲಿದ್ದ ಶೃಂಗೇರಿಮಠದ 12ನೇ ಪೀಠಾಧೀಶರು/ ಸಂನ್ಯಾಸಿ/ತತ್ವಜ್ಞಾನಿ/ದಾರ್ಶನಿಕರು. ಅವರ ಪೂರ್ವ ಇತಿಹಾಸದ ಬಗ್ಗೆ ಅಷ್ಟು ಸ್ಪಷ್ಟವಾಗಿ ನಿಖರವಾಗಿ ತಿಳಿದಿಲ್ಲವಾದರೂ ಮಾಹಿತಿಯೊಂದರ ಪ್ರಕಾರ[14] ವಿದ್ಯಾರಣ್ಯರು ಕ್ರಿ.ಶ.1296 ರಲ್ಲಿ ಏಕಶಿಲಾನಗರಿ ಅಂದರೆ ಆಂಧ್ರಪ್ರದೇಶದ ಇಂದಿನ ವಾರಂಗಲ್‌ನಲ್ಲಿ ಜನಿಸಿದರು. ಮಠದಲ್ಲಿ ಲಭ್ಯವಿರುವ ಗುರುವಂಶ ಕಾವ್ಯದ 5ನೇ ಸರ್ಗದ ಶ್ಲೋಕಗಳು ಏಕಶಿಲಾನಗರಿ ಎಂದೇ ತಿಳಿಸಿದೆ[15].

ವಿದ್ಯಾರಣ್ಯರು ಕೆಲವು ಕೃತಿಗಳಲ್ಲಿ ಪಂಚದಶಿ ಗ್ರಂಥ ಪ್ರಸಿದ್ಧವಾದುದು, ಇದು ಅದ್ವೈತ ಸಿದ್ಧಾಂತಕ್ಕೆ ಸಂಬಂಧಿಸಿದೆ. ಧಾತುವೃತ್ತಿ ಎಂಬ ಗ್ರಂಥವು ಸಂಸ್ಕೃತ ವ್ಯಾಕರಣಕ್ಕೆ ಸಂಬಂಧಿಸಿದೆ. ಮೀಮಾಂಸೆಯ ವಿಷಯಕ್ಕೆ ಸಂಬಂಧಿಸಿದಂತೆ ಜೈಮಿನಿ ನ್ಯಾಯಮಾಲ, ಪರಿಸರ ಸ್ಮೃತಿ ಎಂಬ ಒಂದು ವ್ಯಾಖ್ಯಾನ ಕೃತಿ. ಸ್ಮೃತಿ ಸಂಗ್ರಹ, ವ್ಯವಹಾರ ಮಾಧವ, ಶ್ರೀವಿದ್ಯಾರ್ಥ ದೀಪಿಕ, ವಿವರಣ ಪ್ರಮೇಯ ಸಂಗ್ರಹ, ದೃಕ್‌ದೃಶ್ಯ ವಿವೇಕ, ಅಪರೋಕ್ಷಾನುಭೂತಿ ಟೀಕಾ ಎಂಬ ಉಪನಿಷತ್ತಿನ ಮೇಲಿನ ಟೀಕು, ಹೀಗೆ ಸಾಹಿತ್ಯ ರಚನೆಯಲ್ಲೂ ವಿದ್ಯಾರಣ್ಯರ ಕೊಡುಗೆಯನ್ನು ಗಮನಿಸಬಹುದು.

ವಿದ್ಯಾರಣ್ಯರ ಬಗ್ಗೆ ತಿಳಿಯಲು ಸಹಾಯವಾದ ಶೃಂಗೇರಿಯ ಪಟ್ಟಾವಳಿಯ ಗುರುಪರಂಪರೆ ಪ್ರಕಾರ ವಿದ್ಯಾರಣ್ಯರ ಕಾಲ 1331–1386 ಎಂದೂ, ಸಾಲತೊರೆಯವರ ಅಭಿಪ್ರಾಯ ಪಡುವಂತೆ ಶ್ರೀವಿದ್ಯಾರಣ್ಯರ ಕಾಲ 1375–86[16] ಹೀಗೆ ನಿಖರವಾಗಿ ಸ್ಪಷ್ಟಪಡಿಸಲು ಶೃಂಗೇರಿ ಮಠದ ದಾಖಲೆಗಳಲ್ಲಿ ಪ್ರಕಟಿಸಿರುವ ಕಾಲಮಾನವನ್ನು ಬಹುತೇಕ ಎಲ್ಲರೂ ವಿದ್ಯಾರಣ್ಯರ ಕಾಲ ಎಂದು ಹೇಳುವುದು. ಈ ದಾನಶಾಸನದಿಂದ ವಿದ್ಯಾರಣ್ಯರು ದಾನ ಸಾಕ್ಷಿಯಾಗಿದ್ದರು ಮತ್ತು ಆಗ್ಗೆ ಶೃಂಗೇರಿಯಲ್ಲಿ ನೆಲೆಸಿದ್ದರು ಎಂದು ನಿಸ್ಸಂಶಯವಾಗಿ ಹೇಳಬಹುದು.

**ಹರಿಹರರಾಯರ ಕುಮಾರ ಪದದ ಉಲ್ಲೇಖ**

ಹಲವಾರು ಶಾಸನಗಳಲ್ಲಿ ಕುಮಾರ ದೇವ, ಕುಮಾರನಂದಿ, ಕುಮಾರ ಪಂಡಿತ ಮುಂತಾದ ಉಲ್ಲೇಖಗಳಿವೆ. ಆದರೆ ಈ ದಾನಶಾಸನದಲ್ಲಿ 'ಹರಿಹರರಾಯರ ಕುಮಾರ' ಎಂಬ ಪದ ಉಲ್ಲೇಖವಾಗಿರುವುದು ವಿಶೇಷವಾಗಿದೆ.

**ಕುಮಾರ ದೇವ**

ಕುಮಾರ ದೇವ[17] ಎಂಬ ವ್ಯಕ್ತಿ, ಒಬ್ಬ ಪ್ರತಿಗ್ರಹಿ ಎಂದು ಶಾಸನವೊಂದರಲ್ಲಿ ಉಲ್ಲೇಖವಿದೆ. ಅಲ್ಲದೇ ಒಬ್ಬ ಯತಿ, ಆ ನಿಟ್ಟಿನಲ್ಲಿ ಕುಮಾರ ದೇವರು ಎಂಬ ಪದ ಕಾಳಮುಖ ಯತಿ. ವಿದ್ಯಾರಣ್ಯರು ಒಬ್ಬ ಯತಿಯಾಗಿರುವುದರಿಂದ ಬಹುಶಃ ಕುಮಾರ ಧರ್ಮರಾಯ ಕಾಳಮುಖ ಸಂಪ್ರದಾಯಕ್ಕೆ ಒಳಪಟ್ಟ ವ್ಯಕ್ತಿ ಎಂದು ಹೇಳಲು ನೇರವಾದ ಉದಾಹರಣೆಯಾಗುತ್ತದೆ. ಆದರೆ ಇಲ್ಲಿ ಹರಿಹರ ರಾಯನ ಕುಮಾರ ಎಂದಿರುವುದರಿಂದ ವಿದ್ಯಾರಣ್ಯರ ಸಮಕಾಲೀನ ಯತಿಯಾಗಿ ಕುಮಾರ ಧರ್ಮರಾಯ ಓರ್ವ ಯತಿಯಾಗುವುದು ಅಷ್ಟು ಸಹಜವೆನಿಸುವುದಿಲ್ಲ. ರಾಜರು ಆಳ್ವಿಕೆ ಮಾಡುವಾಗ

[13] ಶ್ರೀ ದೇಸಾಯಿ ಪಾಂಡುರಾಯರು ಮತ್ತು ಶ್ರೀ ಎಚ್. ಕೃಷ್ಣ. (1936). *ಪೂರ್ವೋಕ್ತ.* ಪುಟ. 49

[14] Roshen Dalal. (2014). *Hinduism- An Alphabetical Guide*. Pp.455

[15] ಹುರಗಲ ಲಕ್ಷ್ಮೀನರಸಿಂಹಶಾಸ್ತ್ರೀ. (2017). *ಧರ್ಮರಕ್ಷಕ ಶ್ರೀವಿದ್ಯಾರಣ್ಯರು.* ಪುಟ. 17

[16] A.H.J. April, 1935, Pp. 39–42

[17] *ಎಪಿಗ್ರಾಫಿಯ ಕರ್ನಾಟಿಕ* (ಪರಿಷ್ಕೃತ) (1997). ಸಂಪುಟ: 10. ಪುಟ. 569

ಬಳಸುವ ರಾಜ್ಯ ಸಾಮ್ರಾಜ್ಯಕ್ಕೂ ಯೋಗ ಸಾಮ್ರಾಜ್ಯಕ್ಕೂ ಇರುವ ಸಂಪರ್ಕಕ್ಕೆ ಕುಮಾರಧರ್ಮರಾಯ ಒಬ್ಬ ರಾಜನಾಗಿದ್ದಿದ್ದರೆ ಈ ಶಾಸನವು ಶ್ರೇಣೀಕೃತವಾಗಿ ಸ್ಮರಿಸಿರುವುದಕ್ಕೆ ಸಾಕ್ಷಿಯಾಗಿದೆ.

**ಕುಮಾರನಂದಿ**

ಬ್ರಾಹ್ಮಣರಲ್ಲಿ ಗೋತ್ರ, ಸೂತ್ರದ ಮೂಲಕ ವ್ಯಕ್ತಿಯನ್ನು ಗುರುತಿಸುವಂತೆ ಕುಮಾರ ನಂದಿ ಎಂಬುವವನನ್ನು ಒಬ್ಬ ಬ್ರಾಹ್ಮಣ ಎಂದು ಆ ವ್ಯಕ್ತಿಯ ಅಂಕಿತನಾಮದಿಂದ ತಿಳಿಯಬಹುದು. ಇನ್ನೊಂದು ಕಡೆ ಕುಮಾರಣನ್ಧಿ[18] ಒಬ್ಬ ಜೈನಯತಿ ಎಂದು ಹೇಳಿದೆ. ಕುಮಾರ ಧರ್ಮರಾಯ ಎಂಬ ಹೆಸರಿನ ಮುಂದೆ ಒಡೆಯನೆಂದು ಆ ವ್ಯಕ್ತಿಗೆ ಸಂಬಂಧಿಸದಂತೆ ಹೇಳಿದೆ. ಹಾಗಾಗಿ ಒಡೆಯ ಎಂಬ ಪದ ಸಾಮಾನ್ಯವಾಗಿ ರಾಜನನ್ನು ಕುರಿತಾಗಿರುತ್ತದೆ. ಸಾಮಾನ್ಯವಾಗಿ ಬ್ರಾಹ್ಮಣರು ಜ್ಞಾನ ಸಾಮ್ರಾಜ್ಯವನ್ನು ಬಲ್ಲವರು ವಿನಃ ಸುಖ ಸಂಕಥಾ ವಿನೋದದಿಂದ ರಾಜ್ಯವನ್ನು ಆಳ್ವಿಕೆ ಮಾಡುವ ರಾಜ್ಯಸಾಮ್ರಾಜ್ಯದ ಒಡೆಯರಲ್ಲ. ಹಾಗಾಗಿ ಈ ಧರ್ಮರಾಯ ಒಡೆಯ ರಾಜ್ಯವನ್ನು ಆಳ್ವಿಕೆ ಮಾಡುವ ಒಬ್ಬ ಅರಸ.

**ಕುಮಾರ ಪಂಡಿತ**

ಕುಮಾರ ಪಂಡಿತ ಎಂಬುದು ಹೆಗ್ಗಡೆ ಪದವನ್ನು ಸೂಚಿಸುತ್ತದೆ. ಅಂದ ಮೇಲೆ ಆತ ಓರ್ವ ರೈತನಾಗಿರಬೇಕು. ಬಹುಶಃ ದೇವಸ್ಥಾನಕ್ಕೆ ಸೀಮಿತವಾದ ಗದ್ದೆಯನ್ನು ನೋಡಿಕೊಳ್ಳುವ ಬ್ರಾಹ್ಮಣ ಪಂಡಿತನಾಗಿ ಕುಮಾರ ಪಂಡಿತ ಉಲ್ಲೇಖವಿರಬಹುದು. ಇದು ಹೆಗ್ಗಡೆ, ರೈತಾಪಿ ವರ್ಗವನ್ನು ಪ್ರತಿನಿಧಿಸುವ ಪದವಾಗಿಯೂ ಕುಮಾರ ಪಂಡಿತ ಬಳಕೆಗೊಂಡ ಅಂಕಿತ ನಾಮಪದವಾಗಿದೆ. ಕುಮಾರ ಧರ್ಮರಾಯ ಒಡೆಯ ಒಬ್ಬ ರೈತನೆಂದು, ಹೆಗ್ಗಡೆ ಎಂದು ಅರ್ಥೈಸುವುದು ಸಮಂಜಸವಲ್ಲ. ಕುಮಾರ ಪಂಡಿತಯ್ಯ ದಣ್ನಾಯಕ [19] ಎಂಬುದನ್ನು ಸಹ ಗಮನಿಸಿದಾಗ ಈತ ಅಧಿಕಾರಿ.

ಇವುಗಳಲ್ಲದೆ ಮಗನೆಂದು ಹೇಳುವ ಕುಮಾರಪ್ಪ, ಕುಮಾರ ಬಸಪ್ಪ ನಾಯಕ, ಕುಮಾರ ವೀರ ನಾರಸಿಂಹ, ಕುಮಾರ ಇಮ್ಮಡಿ ಬಸವಪ್ಪ ಇವುಗಳು ಕುಮಾರವೃತ್ತಿಗೆ ಸಂಬಂಧಪಟ್ಟ ಹೆಸರುಗಳಾಗಿರುತ್ತದೆ ಹಾಗಾಗಿ 'ಕುಮಾರ ಧರ್ಮರಾಯ ಒಡೆಯ' ಹರಿಹರರಾಯರ ಕುಮಾರ ವೃತ್ತಿ[20]ಗೆ ಸಂಬಂಧಿಸಿರುವುದೇನಲ್ಲ. ಈ ಶಾಸನದಲ್ಲಿ ಹರಿಹರರಾಯರ ಕುಮಾರ ಎಂದು ಹೇಳಿರುವುದು, ಹರಿಹರನ ಮಗ ಎಂದು ಅರ್ಥೈಸಿಕೊಳ್ಳಲಾಗಿದೆ. ಇದುವರೆಗೂ ಸಿಕ್ಕಿರದ ಈ ಮಾಹಿತಿ ಈ ಮೂಲಕ ಪ್ರಕಟಗೊಂಡಿದೆ.

ಸಾಮಾನ್ಯವಾಗಿ ಕುಮಾರ ಎಂದರೆ ಮಗ. ಕೆಲವು ಸಂದರ್ಭದಲ್ಲಿ ಅದು ಸಹೋದರ ಎಂದು ಕೂಡ ಪ್ರಯೋಗಿಸಿದ್ದುಂಟು. ಅಂತಹ ಬಳಕೆಯಲ್ಲಿ 'ಕುಮಾರ ತೈಲಪ ದೇವಾ' ಎಂಬ ಹೆಸರು ಒಂದು ಉದಾಹರಣೆಯಾಗಿದೆ. ಇದರಲ್ಲಿ *ಕುಮಾರ ತೈಲಪದೇವ* ಎಂಬುವನು ಶಾಸನದಲ್ಲಿರುವ ಬರುವ ಓರ್ವ ಸಹೋದರನಾಗಿದ್ದಾನೆ. ಹಾಗಾಗಿ ಇಲ್ಲಿ ಬಳಕೆಯಾಗಿರುವ ಸಂಬಂಧ ಎಂದರೆ ಅದು ಸಹೋದರನನ್ನು ಕುಮಾರ ಪದದ ಅನುಕ್ರಮದಲ್ಲಿ ಬಳಸಿರುವ ಸಾಕ್ಷಿಯಾಗಿದೆ. *ಅರಸನ ಮಕ್ಕಳು* ಅಥವಾ *ಕುಮಾರ* ಎಂಬ ಪ್ರತ್ಯಯವನ್ನು ಆಧರಿಸಿ ಮತ್ತೊಬ್ಬ *ಸಹೋದರ* ಎಂಬುದನ್ನು ಈ ಕುಮಾರ ತೈಲಪದೇವ ಸ್ಪಷ್ಟವಾದ ಉದಾಹರಣೆಯಾಗಿದೆ.

ಆ ನಿಟ್ಟಿನಲ್ಲಿ ಎರಡನೇ ಹರಿಹರರಾಯನ ಮಕ್ಕಳಲ್ಲಿ ಒಬ್ಬ 'ಕುಮಾರ ವಿರೂಪಾಕ್ಷ' ಎಂಬುವನು ಲಂಕೆಗೆ ದಂಡಯಾತ್ರೆ ಮಾಡಿ ತಂದೆಗೆ ಕಾಣಕೆಯನ್ನು

[18] *ಎಪಿಗ್ರಾಫಿಯ ಕರ್ನಾಟಿಕ* (ಪರಿಷ್ಕೃತ) (1997). ಸಂಪುಟ 7, ಪುಟ 146.

[19] *ಎಪಿಗ್ರಾಫಿಯ ಕರ್ನಾಟಿಕ* (ಪರಿಷ್ಕೃತ) (1997). ಸಂಪುಟ: 10, ಪೂರ್ವೋಕ್ತ. ಪುಟ. 98

[20] *ಎಪಿಗ್ರಾಫಿಯ ಕರ್ನಾಟಿಕ* (ಪರಿಷ್ಕೃತ) (1997). ಸಂಪುಟ: 10, ಪೂವೋಕ್ತ. ಪುಟ.246,248,503,507

ಅರ್ಪಿಸಿದ[21]. ಹೀಗೆ ಮತ್ತೊಬ್ಬ ವೀರ ಚಿಕ್ಕರಾಯವೊಡೆಯ[22] ಆರಗ ಪ್ರಾಂತ್ಯವನ್ನು ಆಳ್ವಿಕೆ ಮಾಡುತ್ತಿದ್ದ. ಬಹುಶಃ ಈ ಕುಮಾರ ಧರ್ಮರಾಯ ಒಡೆಯ ಆತನ ಸಹೋದರರನಿದ್ದಿರಬೇಕು. ಕುಮಾರ ವಿರೂಪಾಕ್ಷ (ಎರಡನೇ ವಿರೂಪಾಕ್ಷ)ನಂತೆ ದಂಡೆಯಾತ್ರೆ ತೊಡಗಿರಬಹುದು. ಆರಗದಿಂದ ಕುಮಾರ ಧರ್ಮರಾಯನು ಆಳ್ವಿಕೆ ಮಾಡುತ್ತಿದ್ದ ಬಗ್ಗೆ ಈ ಶಾಸನವು ಹೇಳುತ್ತದೆ.

ಕೊಪ್ಪ ತಾಲೂಕಿನಲ್ಲಿ ಸಿಕ್ಕ ಶಾಸನವೊಂದು ವೀರಚಿಕ್ಕರಾಯವೊಡೆಯನನ್ನು ಹೆಸರಿಸುತ್ತದೆ. ಆತನಿಗೆ ಈ ಶೃಂಗೇರಿ ಪ್ರದೇಶವು ಒಳಗೊಂಡಿದ್ದರಿಂದ ಆ ಪ್ರದೇಶಕ್ಕೆ ತನ್ನ ಸಹೋದರನನ್ನು ಕಳುಹಿಸಿದ್ದಿರಬಹುದು. ಹೀಗೆ ಕುಮಾರ ಧರ್ಮರಾಯ ಆ ಪ್ರದೇಶದಲ್ಲಿ ಅಸ್ತಿತ್ವ ಹೊಂದಿದ್ದರ ಬಗ್ಗೆ ಈ ಶಾಸನದ ಮೂಲಕ ತಿಳಿಸಲಾಗಿದೆ. ಎರಡನೇ ಹರಿಹರರಾಯನ ಮಕ್ಕಳಲ್ಲಿ ಈ ವ್ಯಕ್ತಿಯ ಹೆಸರು ಈ ಶಾಸನದ ಮೂಲಕ ಸಿಕ್ಕಿದಂತಾಯಿತು. ಈ ಶಾಸನದ ಪ್ರಕಾರ ಕುಮಾರ ಧರ್ಮರಾಯ ಶೃಂಗೇರಿಯ ಆರಗ ಪ್ರಾಂತ್ಯವನ್ನು ಆಳ್ವಿಕೆ ಮಾಡುತ್ತಿದ್ದ ಎಂದಿದೆ.

ಸಹೋದರರ ಸಾಮರಸ್ಯವನ್ನು ಕೊಪ್ಪ ತಾಲ್ಲೂಕಿನ ಶಾಸನದಲ್ಲಿ ಹೀಗೆ ತಿಳಿಸಿದೆ. 'ಮಹಾಭಾರತದ ಯುಧಿಷ್ಠಿರನಂತೆ ಹರಿಹರನು ರಾಜ್ಯಭಾರದಲ್ಲಿರುವಾಗ ಬುಕ್ಕನು ಪಾಂಡವ ಮಧ್ಯಮನಾದ ಅರ್ಜುನನಂತೆ[23] ಬೆಂಬಲವಾಗಿದ್ದ. ಬುಕ್ಕನ ಹಲವು ಯುದ್ಧಗಳ ವಿಜಯಗಳಿಗೆ ಸಹಕಾರಿಯಾಗಿದ್ದ'. ಹಾಗೆ ಕುಮಾರ ಧರ್ಮರಾಯ ಒಡೆಯ ತನ್ನ ಸಹೋದರನಿಗಾಗಿ ಆ ಪ್ರಾಂತ್ಯಕ್ಕೆ ಬಂದಿರಬಹುದು.

[21] ಶ್ರೀ ದೇಸಾಯಿ ಪಾಂಡುರಾಯರು ಮತ್ತು ಶ್ರೀ ಎಚ್. ಕೃಷ್ಣ. (1936). *ಪೂರ್ವೋಕ್ತ*. ಪುಟ .46

[22] *ಎಪಿಗ್ರಾಫಿಯ ಕರ್ನಾಟಿಕ (ಪರಿಷ್ಕೃತ) ಸಂಪುಟ 12, ಕುಂದ್ಗೆರೆ ಶಾಸನ*, ಅನುಬಂಧ 42 ಪುಟ. 487

[23] ಅದೇ.

**ನಾಡಸೇನ ಬೊಮ್ಮದೇವ**

ನಾಡಸೇನ[24] ಎಂಬುದು ಅಧಿಕಾರಸೂಚಕ ಪದವಾಗಿದೆ. ನಾಡಸೇನ ಎಂಬುವವನು ಒಂದು ನಿರ್ದಿಷ್ಟ ಕ್ಷೇತ್ರವನ್ನು ಪ್ರತಿನಿಧಿಸುವ ಅಧಿಕಾರಿ. ಆತನ ಕೆಳಗೆ ಏನೇ ದಾನ–ದತ್ತಿಯ ವಿವರಗಳು ಇದ್ದರೂ ಆತನಿಗೂ ತಿಳಿದಿರಬೇಕಾಗಿರುತ್ತದೆ. ಆ ಪ್ರದೇಶದ ಲೆಕ್ಕಪತ್ರಗಳ ಅಧಿಕಾರಿಯಾಗಿಯೂ ಜವಾಬ್ದಾರನಾಗಿರುತ್ತಾನೆ. ಈ ಪ್ರದೇಶದ ನಾಡಸೇನ ಅಧಿಕಾರಿ ಬೊಮ್ಮದೇವ. ಈ ಶಾಸನವನ್ನು ರಚಿಸಿದವರು ಬೊಮ್ಮದೇವರು. ಆದರೆ ಬೊಮ್ಮ ಎಂಬ ಹೆಸರಿನ ಅಧಿಕಾರಿಗೆ ಬೊಮ್ಮದೇವರ ಬರಹ ಎನ್ನುವ ಮೂಲಕ ಕ್ಷೇತ್ರಪಾಲ ಬ್ರಹ್ಮದೇವರ ಬಗ್ಗೆಯೂ ಒಳಗೊಂಡಿರಬಹುದೇ? ಎಂಬ ಸಂಶಯ ಮೂಡಿಸುತ್ತದೆ. ಬ್ರಹ್ಮದೇವನೆಂತಲೋ, ನಾಗದೇವ ಎಂತಲೋ ಇದಿದ್ದರೆ ಅದು ಅಧಿಕಾರಿ ಎಂದುಕೊಳ್ಳಬಹುದಿತ್ತು. ಆದರೆ ದೇವರು ಎಂಬ ಪದವನ್ನು ಬಳಸಿ ಆ ಬೊಮ್ಮದೇವರ ಬಗ್ಗೆ ಮುಂದೆ ಅಧ್ಯಯನಕ್ಕೆ ಹಾದಿ ಮಾಡಿಕೊಟ್ಟಿದೆ.

**ಶ್ರೀ ಉಯಂಲಿದೇವಿ**

ಶೃಂಗೇರಿ ತಾಲ್ಲೂಕಿನಲ್ಲಿ ಶಕ್ತಿ ಆರಾಧನೆಗೆ ಸಂಬಂಧಿಸಿದಂತೆ ಹಲವೆಡೆ ವನದುರ್ಗಿಯನ್ನು ಪೂಜಿಸುವ ಸಂಪ್ರದಾಯವಿದೆ. ಈ ಶಾಸನದ ಪ್ರಾರಂಭದಲ್ಲಿನ ಉಬ್ಬು ರೇಖಾಚಿತ್ರದಲ್ಲಿ ತ್ರಿಶೂಲದ ಪಕ್ಕದಲ್ಲಿ ವಾಮನನ ಚಿತ್ರವಿದೆ. ದಾನವನ್ನು ಕೊಡುವಾಗ ಸೂರ್ಯ–ಚಂದ್ರರನ್ನು ಸಾಕ್ಷಿಯಾಗಿ ಗೌರವಿಸುವಷ್ಟೇ ವನದುರ್ಗಿಯ ಪೂಜೆಯ ಸಂಪ್ರದಾಯ ಪದ್ಧತಿಗೂ ನೀಡಿದ್ದಾರೆ. ಈ ಶಾಸನದಲ್ಲಿ ಆದಿಯಲ್ಲಿ ತ್ರಿಶೂಲ ಶಿಲ್ಪದಿಂದ ಸಾಕ್ಷಿಯಾದರೆ, ಬರಹದಿಂದ ಶ್ರೀಉಯಂಲಿದೇವಿಯು ಆ ಕ್ಷೇತ್ರವನ್ನು ಕಾಪಾಡುವ ದೈವವಾಗಿ ಸಾಕ್ಷಿಯಾಗಿದ್ದಾಳೆ. ಆ ಮೂಲಕ ನಿವೇದಿಸಿಕೊಂಡ ವಿಷಯಕ್ಕೆ ಬದ್ಧರಾಗಿ ನಡೆಯಲು ಶಾಸನದ ಮೂಲಕ

[24] ಶ್ರೀನಿವಾಸ ರಿತ್ತಿ. (2000). ಪೂರ್ವೋಕ್ತ. ಪುಟ 16

ಸೂಚಿಸಲಾಗಿದೆ. ಶ್ರೀಉಯಂಲಿ ದೇವಿ ಒಂದು ವನದುರ್ಗಿಯಾಗಿ, ಉಯಂಲಿ ಉಯ್ಯಂಲಿ, ಉಯ್ಯಾಲೆ ಎಂದು ಅರ್ಥೈಸಿಕೊಂಡರೆ ಈ ಶಾಸನದಲ್ಲಿನ ವನದುರ್ಗಿ ದೇವತೆಯನ್ನು ಅಂದಿಗೆ ಆ ಜಾಗದಲ್ಲಿ ಉಯ್ಯಾಲೆ ಮಂಟಪದಲ್ಲಿ ದೇವಿಯನ್ನು ಪೂಜಿಸುವ ಪದ್ಧತಿ ಇದ್ದಿರಬೇಕು. ಪ್ರಾರಂಭದಲ್ಲಿ ಹೇಳಿದಂತೆ ಈ ಪರಿಸರದಲ್ಲಿನ ವನದುರ್ಗಿ ದೇವತೆಯು ಆ ಪ್ರದೇಶದಲ್ಲಿನ ಎತ್ತರವಾದ ಜಾಗದಲ್ಲಿ ನೆಲೆಸಿದೆ. ಒಂದು ಮಂಟಪವಿದೆ ಅದರ ಒಳಗೆ ಶಿಲೆಯ ರೂಪದಲ್ಲಿ ಜನರು ಆ ದೇವರಿಗೆ ಪೂಜೆ ಮಾಡಿದ್ದ ಕುರುಹು ಇದೆ. ಬಹುಶಃ ಸುತ್ತ ಗೋಡೆ ಕಟ್ಟಿ ದೇವಾಲಯ ನಿರ್ಮಿಸಬಹುದಿತ್ತು ಆದರೆ ಆ ದೇವಿ ಮಂಟಪದಲ್ಲಿ ಇರುವುದು ಪ್ರಸ್ತುತ ಶೋಧನೆಯ ಪೂರಕವಾದ ಅಂಶವೆನಿಸಿತು. ಈ ಮೂಲಕ ತಾಲೂಕಿನಲ್ಲಿರುವ ಹಲವು ವನದುರ್ಗಿಯ ಕ್ಷೇತ್ರಗಳಲ್ಲಿ ಇದು ಬಹಳ ವಿಶೇಷ ಹೆಸರುಳ್ಳದಾಗಿದೆ.

ಒಟ್ಟಾರೆ ಹರೂರುಮಕ್ಕಿ ದಾನಶಾಸನವು 33 ಸಾಲುಗಳನ್ನು ಹೊಂದಿದ್ದು, ಈ ಸಾಲುಗಳಲ್ಲಿ ಗಣಪತಿಯ ಸ್ತುತಿ, ದಾನವನ್ನು ನೀಡಿರುವ ಸಮಯ, ಎರಡನೇ ಹರಿಹರರಾಯ, ವಿದ್ಯಾರಣ್ಯರ ಉಲ್ಲೇಖ, ಹರಿಹರರಾಯ ಕುಮಾರ, ಬೊಮ್ಮದೇವರು ಮತ್ತು ಉಯಂಲಿದೇವಿ ಹೀಗೆ ಅನೇಕ ವಿಷಯಗಳನ್ನು ಒಳಗೊಂಡಿದ್ದು ಕನ್ನಡ ಸಂಶೋಧನೆ ಹಾಗೂ ಇತಿಹಾಸ ಸಂಶೋಧನೆಗೆ ಪೂರಕವಾಗಿದೆ.

**ಆಕರ ಗ್ರಂಥಗಳು**


- ಎಪಿಗ್ರಾಫಿಯ ಕರ್ನಾಟಿಕ (ಪರಿಷ್ಕೃತ) (1997). ಸಂಪುಟ: 10, ಕು.ಕ.ಅ.ಸಂ, ಮೈಸೂರು ವಿಶ್ವವಿದ್ಯಾಲಯ.
- ಎಪಿಗ್ರಾಫಿಯ ಕರ್ನಾಟಿಕ (ಪರಿಷ್ಕೃತ) (1997). ಸಂಪುಟ 7, ಕು.ಕ.ಅ.ಸಂ, ಮೈಸೂರು ವಿಶ್ವವಿದ್ಯಾಲಯ.
- ಎಪಿಗ್ರಾಫಿಯ ಕರ್ನಾಟಿಕ (ಪರಿಷ್ಕೃತ) ಸಂಪುಟ 12, ಕುಂದ್ಕೆರೆ ಶಾಸನ, ಅನುಬಂಧ 42 ಕು.ಕ.ಅ.ಸಂ, ಮೈಸೂರು ವಿಶ್ವವಿದ್ಯಾಲಯ.
- ಹುರಗಲ ಲಕ್ಷ್ಮೀನರಸಿಂಹಶಾಸ್ತ್ರೀ. (2017). *ಧರ್ಮರಕ್ಷಕ ಶ್ರೀವಿದ್ಯಾರಣ್ಯರು.*
- ಕೃಷ್ಣರಾವ್ ಎಂ. ವಿ. ಮತ್ತು ಎಂ. ಕೇಶವಭಟ್ಟ. (1970). *ಕರ್ಣಾಟಕದ ಇತಿಹಾಸ ದರ್ಶನ.* ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ.
- ಮಂಜುನಾಥ ಎಮ್. ಜಿ. (2011). *ಮಾಸ್ತಿಕಲ್ಲು ವೀರಗಲ್ಲು ಮತ್ತು ನಿಸಿದಿ ಶಾಸನಗಳು.* ಕ.ರಾ.ಮು.ವಿ.
- ನಾಗಭೂಷಣ ಸಿ.
- ಕನ್ನಡ ನಾಡಿನ ಶಾಸನಗಳ ಅಧ್ಯಯನ: ಕೆಲವು ಗ್ರಹಿಕೆಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ನಾಗರಾಜ ರಾವ್. ಎಚ್.ಎಂ. ಶಾಸನ ಸಿರಿ. ಉಷಾ ಪ್ರಕಾಶನ.
- ಶ್ರೀನಿವಾಸ ರಿತ್ತಿ. (2000). ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.
- ಶ್ರೀ ದೇಸಾಯಿ ಪಾಂಡುರಾಯರು ಮತ್ತು ಶ್ರೀ ಎಚ್. ಕೃಷ್ಣ. (1936). *ವಿಜಯನಗರ ಸಾಮ್ರಾಜ್ಯ 1336–1681.* ವಿಜಯನಗರ ಸ್ಮಾರಕೋತ್ಸವ ಮಂಡಳಿ.
- ತಿಪ್ಪೇರುದ್ರಸ್ವಾಮಿ ಎಚ್. (2018). *ಕರ್ನಾಟಕ ಸಂಸ್ಕೃತಿ ಸಮೀಕ್ಷೆ.* ಡಿ.ವಿ.ಕೆ. ಮೂರ್ತಿ ಪ್ರಕಾಶನ.
- Roshen Dalal. (2014). Hinduism- An Alphabetical Guide. Vidyaranya Pp.455
- Swamikannu Pillai, L.D *An Indian Ephemeris A.D.700 to A.D. 1799, Vol. IV,*